


ಇಂದೋರ್‌ನಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ 243 ರನ್ ಬಾರಿಸಿ ಔಟ್ ಆದ ಮಯಂಕ್ ಅವರನ್ನು ಅಭಿನಂದಿಸಿದ ಬಾಂಗ್ಲಾ ಆಟಗಾರರು

ತಂಡ ಪ್ರಕಟಿಸಲಾಗಿತ್ತು. 2010ರಲ್ಲಿ ನಡೆದ ಆ ವಿಶ್ವಕಪ್‌ಗೆ ಕರ್ನಾಟಕದ ಇವರಿಬ್ಬರಿಗೆ ಸ್ಥಾನ ಲಭಿಸಿತ್ತು. ಅಕ್ಕ ಪಕ್ಕ ನಿಂತಿದ್ದು ಈ ಪ್ರತಿಭಾವಂತ ಆಟಗಾರರು ತಮ್ಮ ಕನಸು ಹಂಚಿಕೊಂಡಿದ್ದರು. ಒಂದು ದಿನ ರಾಜ್ಯ ಹಾಗೂ ರಾಷ್ಟ್ರ ತಂಡದಲ್ಲಿ ಆಡುವ ಆಸೆ ವ್ಯಕ್ತಪಡಿಸಿದ್ದರು.

ಹಾಗೆ ನೋಡಿದರೆ 28 ವರ್ಷ ವಯಸ್ಸಿನ ಮಯಂಕ್‌ಗಿಂತ ರಾಹುಲ್‌ಗೆ ರಾಷ್ಟ್ರೀಯ ತಂಡದಲ್ಲಿ ಬೇಗ ಅವಕಾಶ ಲಭಿಸಿತು. ಮಯಂಕ್ ದೇಶಿ ಕ್ರಿಕೆಟ್‌ನಲ್ಲಿ ಎಷ್ಟೇ ಅಬ್ಬರಿಸಿದರೂ ಅವರತ್ತ ಕಣ್ಣು ಬೀಳಲೇ ಇಲ್ಲ. ಮುಂಬೈನಲ್ಲಿ ಕೇಂದ್ರ ಸ್ಥಾನ ಹೊಂದಿರುವ ಬಿಸಿಸಿಐ ಎಂಬ 'ಕ್ರಿಕೆಟ್ ದೊಡ್ಡಣ್ಣ'ನ ಕಣ್ಣು ಕರ್ನಾಟಕದ ಮೇಲೆ ಬೀಳುವುದು ತುಸು ತಡವಾಗಿಯೇ. ಅದೇನೇ ಇರಲಿ; ಮಯಂಕ್ 2017–18ರಲ್ಲಿ ರಣಜಿ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ. ಒಂದು ತ್ರಿಶತಕ ಕೂಡ ಬಾರಿಸಿದ್ದರು. ಆ ಋತುವಿನಲ್ಲಿ ಸಾವಿರ ರನ್‌ಗಳ ಗಡಿ ದಾಟಿದ್ದರು. ಅದಲ್ಲದೇ, ವಿಜಯ ಹಜಾರೆ ಟ್ರೋಫಿಯಲ್ಲೂ ಮಿಂಚಿದ್ದರು. ಆ ವರ್ಷ ಕರ್ನಾಟಕ ತಂಡ ವಿಜಯ ಹಜಾರೆ ಟ್ರೋಫಿ ಗೆದ್ದಿತ್ತು. ರಣಜಿ ಟ್ರೋಫಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದವರಿಗೆ ನೀಡುವ ಮಾಧವರಾವ್ ಸಿಂಧಿಯಾ ಪ್ರಶಸ್ತಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಈ ಆಟಗಾರನಿಗೆ ನೀಡಿತು. ಈ ಹಂತದಲ್ಲಿ ಹಲವು ಕ್ರಿಕೆಟಿಗರು ರಾಷ್ಟ್ರೀಯ ತಂಡದಲ್ಲಿ ಮಯಂಕ್‌ಗೆ ಸ್ಥಾನ ನೀಡುವಂತೆ ಬ್ಯಾಟ್ ಬೀಸಿದರು.

2018ರ ಸೆಪ್ಟೆಂಬರ್‌ನಲ್ಲಿ ವೆಸ್ಟ್‌ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಗೆ ಆಯ್ಕೆ ಮಾಡಲಾಯಿತು. ಆದರೆ, ಸುಮ್ಮನೇ ಬೆಂಚ್ ಕಾಯಿಸಬೇಕಾಯಿತು. ನಂತರ ಆಸ್ಟ್ರೇಲಿಯಾ ಪ್ರವಾಸಕ್ಕೆ ಪರಿಗಣಿಸಲಿಲ್ಲ. ಆದರೆ, ಪ್ರವಾಸದ ಮಧ್ಯದಲ್ಲಿ ಪೃಥ್ವಿ ಷಾ ಗಾಯಗೊಂಡಿದ್ದರಿಂದ ಕರ್ನಾಟಕದ ಆಟಗಾರನಿಗೆ ಅವಕಾಶ ಒಲಿಯಿತು. ಅದೇ ವರ್ಷ ಡಿಸೆಂಬರ್ 26ರಂದು ಪದಾರ್ಪಣೆ ಮಾಡಿದ ಅವರು ಮೆಲ್ಬರ್ನ್‌ನಲ್ಲಿ ಆಸ್ಟ್ರೇಲಿಯಾ ಎದುರು 76 ರನ್ ಗಳಿಸಿದರು. ಕಳೆದ ತಿಂಗಳು ದಕ್ಷಿಣ ಆಫ್ರಿಕಾ ವಿರುದ್ಧ ದ್ವಿಶತಕ ಬಾರಿಸಿದರು. ಮೊದಲ ಶತಕವನ್ನೇ



ದ್ವಿಶತಕವನ್ನಾಗಿ ಪರಿವರ್ತಿಸಿದ್ದು ವಿಶೇಷ. ಆದರೆ, ಆರಂಭಿಕ ಆಟಗಾರನಾಗಿ ವಿಫಲರಾದ ರಾಹುಲ್ ಸ್ಥಾನಕ್ಕೆ ಮಯಂಕ್ ಆಯ್ಕೆಯಾಗಿದ್ದು ಮಾತ್ರ ಕೋ–ಇನ್ಸಿಡೆನ್ಸ್!

ರಾಹುಲ್ ದ್ರಾವಿಡ್ ರೀತಿ ಕೆ.ಎಲ್. ರಾಹುಲ್ ಅವರಲ್ಲಿ ಅತೀವ ತಾಳ್ಮೆ, ವಿಶ್ವಾಸ ಇದ್ದರೆ, ಮಯಂಕ್ ಅವರದ್ದು ಸೆಹ್ವಾಗ್ ರೀತಿಯ ಮನೋಭಾವ. ಸದಾ ಆಕ್ರಮಣಕಾರಿಯಾಗಿಯೇ ಆಡುವ ಈ ಆಟಗಾರ ತಿಂಗಳ ಅಂತರದಲ್ಲಿ ಎರಡು ದ್ವಿಶತಕ ಬಾರಿಸಿದ್ದಾರೆ. ಟೆಸ್ಟ್ ರ್‍ಯಾಂಕಿಂಗ್‌ನಲ್ಲೂ ಮೇಲೇರಿದ್ದಾರೆ. ಹಲವು ದಾಖಲೆಗಳನ್ನು ಬರೆದಿದ್ದಾರೆ. ಟೆಸ್ಟ್ ಕ್ರಿಕೆಟ್‌ಗೆ ಲಾಯಕ್ಕಲ್ಲ ಎಂದು ಟೀಕಿಸಿದವರ ಬಾಯಲ್ಲೇ ಶಹಬ್ಬಾಸ್ ಎನಿಸಿಕೊಳ್ಳುತ್ತಿದ್ದಾರೆ.

ಬಾಂಗ್ಲಾದೇಶ ಎದುರು ಇಂದೋರ್‌ನಲ್ಲಿ ಅಕ್ಷರಶಃ ಅಬ್ಬರಿಸಿದರು. 243 ರನ್ ಬಾರಿಸಿದ ಅವರು ತೆಗೆದುಕೊಂಡ ಎಸೆತಗಳು ಕೇವಲ 330. ಅಷ್ಟರಲ್ಲಿ 28 ಬೌಂಡರಿ ಹಾಗೂ 8 ಸಿಕ್ಸರ್ ಸಿಡಿಸಿದ್ದರು. ಅಂದಹಾಗೆ, ಮಯಂಕ್ ಅವರ ಕೋಚ್ ಮೈಸೂರಿನ ಆರ್‌ಎಕ್ಸ್ ಮುರಳಿ.

ಆಟದ ಯಶಸ್ಸಿನ ಜೊತೆಗೆ ಬಾಲ್ಯದ ಗೆಳತಿ ಆಶಿತಾ ಸೂದ್ ಅವರ ಕೈಹಿಡಿದು ಬಾಳ ಸಂಗಾತಿಯನ್ನಾಗಿ ಮಾಡಿಕೊಂಡಿದ್ದಾರೆ. ಆಶಿತಾ ಅವರು ಪೊಲೀಸ್ ಅಧಿಕಾರಿ ಪ್ರವೀಣ್ ಸೂದ್ ಅವರ ಪುತ್ರಿ.

ಮಯಂಕ್ ವಿಪಸನ ಧ್ಯಾನದಲ್ಲಿ ತೊಡಗುತ್ತಾರೆ. ಗೌತಮ ಬುದ್ಧನು ಶತಮಾನಗಳ ಹಿಂದೆ ಪರಿಚಯಿಸಿದ ಧ್ಯಾನವಿದು. ಇದು ಅವರಿಗೆ ಶಕ್ತಿ, ಧೈರ್ಯ, ಆತ್ಮವಿಶ್ವಾಸ ತುಂಬಿದೆಯಂತೆ. ತಪ್ಪುಗಳನ್ನು ಅವಲೋಕಿಸಿ ತಿದ್ದಿಕೊಳ್ಳಲು ಸಾಧ್ಯವಾಗಿದೆಯಂತೆ. ಇದಕ್ಕೆ ಕಾರಣ ಅವರ ತಂದೆ, ಉದ್ಯಮಿ ಅನುರಾಗ್ ಅಗರವಾಲ್. ಜೋಸೆಫ್ ಮರ್ಫಿಯ 'ದಿ ಪವರ್ ಆಫ್ ಯುವರ್ ಸಬ್‌ಕಾನ್ಷಿಯಸ್ ಮೈಂಡ್' ಕೃತಿಯನ್ನು ಪುತ್ರನಿಗೆ ಪರಿಚಯಿಸಿದ್ದು ಪ್ರಮುಖ ತಿರುವುಗಳಲ್ಲಿ ಒಂದು.

ಕರ್ನಾಟಕದ ಹುಡುಗ ಮಯಂಕ್ ಮತ್ತಷ್ಟು ಮಿಂಚಲಿ, ಕ್ರಿಕೆಟ್ ಅಭಿಮಾನಿಗಳಿಗೆ ಮತ್ತಷ್ಟು ಖುಷಿ ನೀಡಲಿ, ಭಾರತ ಗೆಲ್ಲುತ್ತಿರಲಿ.